5. ಹೊಂಬೇಗೌಡ ನಗರ ಮತ್ತು ವಿದ್ಯಾಪೀಠ ವೃತ್ತಗಳಲ್ಲಿನ ಮಹಾನಗರ ಪಾಲಿಕೆ ಆಟದ ಬಯಲುಗಳ ಅಭಿವೃದ್ಧಿ.

6. ಸುಲೇಮಾನ್ ಪೋಲೀಸ್ ಮೈದಾನದ ಅಭಿವೃದ್ಧಿ.

7. ಗುರುನಾನಕ ಭವನದ ಅಭಿವೃದ್ಧಿ.

8. ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದ ಅಭಿವೃದ್ಧಿ.

9. ಮೈಸೂರು ಸಾಹುಕಾರ್ ಚನ್ನಯ್ಯ ಕುಸ್ತಿ ಅಖಾಡಾ ಅಭಿವೃದ್ಧಿ.

10. ಮೈಸೂರು ಒಳಾಂಗಣ ಕ್ರೀಡಾಂಗಣ ನಿರ್ಮಾಣ.

ಈ ಎಲ್ಲಾ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು, ದಿನಾಂಕ 31-3-1997ರ ಹೊತ್ತಿಗೆ ಪೂರ್ಣಗೊಳ್ಳಲಿವೆ.

ಬೆಂಗಳೂರಿನಲ್ಲಿ ಕೋರಮಂಗಲ ಮತ್ತು ಮೈಸೂರಿನಲ್ಲಿ ಹೂಟಗಹಳ್ಳಿ ಬಳಿ ಇರುವ ಕರ್ನಾಟಕ ಗೃಹ ನಿರ್ಮಾಣ ಮಂಡಳಿ ವಸತಿ ಗೃಹಗಳಲ್ಲಿ ಕ್ರೀಡಾಪಟುಗಳಿಗೆ ವಸತಿ ಸೌಕರ್ಯವನ್ನು ಏರ್ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಷ್ಟ್ರೀಯ ಕ್ರೀಡೆಗಳಿಗಾಗಿ ಪೂರ್ವಸಿದ್ಧತೆಗಳನ್ನು ಮಾಡಲು ಕೆಳಕಾಣಿಸಿದ ಸಮಿತಿ ಮತ್ತು ಉಪ ಸಮಿತಿಗಳನ್ನು ರಚಿಸಲಾಗಿದೆ.

1. ತಾಂತ್ರಿಕ ಸಮಿತಿ (ಜಿ.ಟಿ.ಸಿ.ಸಿ.)
2. ಭೋಜನ ಉಪ ಸಮಿತಿ.
3. ವಸತಿ ಉಪ ಸಮಿತಿ.
4. ಸಾರಿಗೆ ಉಪ ಸಮಿತಿ.
5. ಸ್ವಾಗತ ಉಪ ಸಮಿತಿ.
6. ಪ್ರಚಾರ ಉಪ ಸಮಿತಿ.
7. ಸಾಂಸ್ಕೃತಿಕ ಮತ್ತು ಸಮಾರಂಭಗಳ ಉಪ ಸಮಿತಿ.

ಈ ಎಲ್ಲಾ ಉಪ ಸಮಿತಿಗಳು ಸಭೆ ಸೇರಿ, ದತ್ತವಾದ ಎಲ್ಲಾ ಸಿದ್ಧತೆ ಕ್ರಮಗಳನ್ನು ಕೈಗೊಳ್ಳುತ್ತಿದೆ.

ವಿಷಯ:- ಕಾರ್ಮಿಕರ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಹಾಗೂ ಸಿಬ್ಬಂದಿ ಕುರಿತು.

174(382)

ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು):- ಮಾನ್ಯ ಉಪ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ಕಾರ್ಮಿಕ ಇಲಾಖೆ ಹಾಗೂ ಎಲ್ಲಾ ಕಾರ್ಮಿಕ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಹಾಗೂ ಸಿಬ್ಬಂದಿಗಳ ಹುದ್ದೆಗಳು ಖಾಲಿ ಇವೆಯೆ;

ಆ) ಖಾಲಿ ಇದ್ದಲ್ಲಿ , ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಯವರು):-

ಅ) ಕೆಲವು ಹುದ್ದೆಗಳು ಖಾಲಿ ಇವೆ.

ಆ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಧ್ಯಕ್ಷರು:- ಲಿಖಿತ ಮೂಲಕ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡಲಾಯಿತು.

4. ದಿನಾಂಕ 14.2.97ರ ಪ್ರಶ್ನೋತ್ತರಗಳ ಮಂಡನೆ

ಶ್ರೀ ಎಂ.ಸಿ. ನಾಣಯ್ಯ:- ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು:- 14ನೇ ಫೆಬ್ರವರಿ 1997 ರಂದು ಪ್ರಶ್ನೋತ್ತರ ನಡೆಯದ ಕಾರಣ, ಆ ದಿನದ 15 ಚುಕ್ಕೆ ಗುರುತಿನ ಮತ್ತು 27 ಚುಕ್ಕೆ ರಹಿತ ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದಿಡುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ವಿಷಯ:- ಕೊಳಚೆ ನಿರ್ಮೂಲನಾ ಮಂಡಳಿಯಿಂದ ಕೈಗೊಂಡ ಕಾರ್ಯಕ್ರಮಗಳ ಕುರಿತು.

31(346)

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಕೈಗೊಂಡ ಕಾರ್ಯಕ್ರಮಗಳೇನು;

ಆ) ಮಂಗಳೂರಿನ ಡೊಂಗರಕೇರಿಯಲ್ಲಿರುವ ಮುರ್ಗಿ ಮಠವನ್ನು ಕೊಳಚೆ ಪ್ರದೇಶ ಎಂದು ಗುರುತಿಸಲಾಗಿದೆಯೇ;

ಇ) ಮಂಗಳೂರಿನ ಮುರ್ಗಿ ಮಠ ಕೊಳಚೆ ಪ್ರದೇಶದ ಜಾಗವನ್ನು ಖಾಸಗಿಯವರಿಗೆ ಮಾರಾಟ ಮಾಡಲು ಆಲೋಚಿಸಲಾಗಿದೆಯೇ ಸದರಿ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಯಾವಾಗ ಆರಂಭಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಮಂಡಳಿಯು ಕೊಳಚೆ ನಿವಾಸಿಗಳ ಜೀವನಮಟ್ಟ ಸುಧಾರಿಸಲು ಹಮ್ಮಿಕೊಂಡಿರುವ ಪ್ರಮುಖ ಕಾರ್ಯಕ್ರಮಗಳು ಈ ಕೆಳಗಿನಂತಿರುತ್ತವೆ.